ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು - 1

ಸಂಖ್ಯೆ:ಎಂ:2/ಅ.ದಾ./ಬ.ಪ್ರ.ಅ.ದಾ.ಕಾ.ಮುಂ.ಬಗ್ಗೆ/27/2016-17 07-3-2017

**-: ಸುತ್ತೋಲೆ :-**

**ವಿಷಯ :** ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವನ್ನು ಬೇಸಿಗೆ ರಜಾ ಅವಧಿಯಲ್ಲಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಕಂಇ 18 ಟಿಎನ್ಆರ್ 2017 ಬೆಂಗಳೂರು ದಿ:24.01.2017.
2. ಸರ್ಕಾರ ಆದೇಶ ಸಂಖ್ಯೆ: ಆರ್‌ಡಿ 259 ಟಿಎನ್ಆರ್ 2016(ಭಾಗ-1) ಬೆಂಗಳೂರು, ದಿನಾಂಕ: 06-10-2016, 29-10-2016,
3. ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: WP(C) 196/200 ದಿನಾಂಕ: 20-04-2004.
4. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿ:28.01.2017 ರಂದು ನಡೆದ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಶ ಸಮಿತಿ ಸಭೆ.
5. ಎಂ.ಹೆಚ್.ಆರ್.ಡಿ ನವದೆಹಲಿಯಲ್ಲಿ ನಡೆದ ಎಂ.ಡಿ.ಎಂ ನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ ಸಭೆಯ ದಿನಾಂಕ:15.02.2017.

* * * * *

2016-17ನೇ ಸಾಲಿನಲ್ಲಿ ಕಂದಾಯ ಇಲಾಖೆಯು ರಾಜ್ಯದ 30 ಜಿಲ್ಲೆಗಳ 160 ಕಂದಾಯ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಉಲ್ಲೇಖ (1)ರಲ್ಲಿ ಘೋಷಿಸಿ ಆದೇಶಿಸಿದೆ.

ಘನ ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಬೇಸಿಗೆ ರಜೆಯಲ್ಲಿಯೂ ಸಹ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟವನ್ನು ನೀಡಬೇಕಾಗಿರುತ್ತದೆ. ಬೇಸಿಗೆ ರಜೆಯ ಅವಧಿಯು ದಿನಾಂಕ: 11-04-2017 ರಿಂದ 28-5-2017ರವರೆಗೆ ಇದ್ದು, ಈ ಅವಧಿಯಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ದಿನಾಂಕ:28-01-2017 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯಾ-ವ್ಯಯ ಅನುಮೋದನೆ ಸಭೆಯ ನಿರ್ಣಯದಂತೆ ಈ ಕೆಳಕಂಡ ಕ್ರಮಗಳನ್ನು ಮತ್ತು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

**1. ಬೇಸಿಗೆ ರಜಾ ಅವಧಿಯಲ್ಲಿ ಅಡುಗೆ ಕೇಂದ್ರಗಳನ್ನು ಗುರುತಿಸುವಿಕೆ:**

- ಪ್ರಸ್ತುತ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದ್ದು, ಬೇಸಿಗೆ ರಜಾ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ಯಾವ ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ ಅಂತಹ ಶಾಲೆಗಳ ಪೈಕಿ ಹೆಚ್ಚು ಮಕ್ಕಳಿರುವ ಶಾಲೆಯನ್ನು ಈ ಅವಧಿಗೆ ಮಾತ್ರ ಕೇಂದ್ರ ಶಾಲೆ ಎಂದು ಗುರುತಿಸಿ, ಆ ಶಾಲೆಯನ್ನು ಅಂತಿಮಗೊಳಿಸುವುದು. ಜೊತೆಗೆ ಮಧ್ಯಾಹ್ನ ಉಪಾಹಾರ ಯೋಜನೆ ಕಾರ್ಯಕ್ರಮಕ್ಕೆ ಶಾಲೆಗಳ ಪಟ್ಟಿಯನ್ನು ಡೈಸ್ ಮಾಹಿತಿ ಆಧಾರದ ಮೇಲೆ ಗುರುತಿಸಿ ಅಂತಿಮಗೊಳಿಸತಕ್ಕದ್ದು. ಈ ಸಂಬಂಧ ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮ್ಯಾಪಿಂಗ್ ಕಾರ್ಯವನ್ನು ಸಿ.ಆರ್.ಪಿ./ಇ.ಸಿ.ಒ. ರವರ ಸಹಕಾರದೊಂದಿಗೆ ದಿನಾಂಕ:16-3-2017ರ ಒಳಗಾಗಿ ಪೂರ್ಣಗೊಳಿಸತಕ್ಕದ್ದು, ನಂತರದಲ್ಲಿ ಉಪನಿರ್ದೇಶಕರು(ಆಡಳಿತ)ರವರು ಜಿಲ್ಲಾ ಹಂತದಲ್ಲಿ ಪರಿಶೀಲಿಸಿ ಜಿಲ್ಲಾವಾರು ಶಾಲೆಗಳ ಪಟ್ಟಿಯನ್ನು ವೆಬ್‌ಸೈಟ್ ನಲ್ಲಿ ದೊರೆಯುವಂತೆ

ಕ್ರಮವಹಿಸ ಬೇಕಾಗಿರುವುದರಿಂದ ದಿನಾಂಕ:17–3–2017ರೊಳಗೆ ಜಂಟಿ ನಿರ್ದೇಶಕರು ಮಧ್ಯಾಹ್ನ ಉಪಾಹಾರ ಯೋಜನೆಯ ರಾಜ್ಯ ಕಛೇರಿಗೆ ಸಾಫ್ಟ್ ಮತ್ತು ಹಾರ್ಡ್ ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು.

- ಮೇಲ್ಕಂಡಂತೆ ಒಂದು ವೇಳೆ ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ(ಉನ್ನತೀಕರಿಸಿದ ಶಾಲೆ/ಅನುದಾನಿತ ಶಾಲೆ) ಹೆಚ್ಚು ದಾಖಲಾತಿ ಹೊಂದಿರುವ ಶಾಲೆಯನ್ನು ಕೇಂದ್ರ ಶಾಲೆಯಾಗಿ ಗುರುತಿಸಿ ಇತರೆ ಶಾಲೆಗಳ ಮಕ್ಕಳನ್ನು ಸದರಿ ಶಾಲೆಗೆ ಕಳುಹಿಸುವ ಕಾರ್ಯವನ್ನು ನಿರ್ವಹಿಸತಕ್ಕದ್ದು ಹಾಗೂ ಅಂತಹ ಮಕ್ಕಳ ಪಟ್ಟಿಯನ್ನು ಗುರುತಿಸ್ಪಟ್ಟ ಶಾಲೆಯ ಮುಖ್ಯ ಶಿಕ್ಷಕರಿಗೆ ಕಡ್ಡಾಯವಾಗಿ ದೃಢೀಕರಿಸಿ ನೀಡತಕ್ಕದ್ದು. ಈ ರೀತಿ ಗುರುತಿಸ್ಪಟ್ಟ(ಕೇಂದ್ರ) ಶಾಲೆಯ ಮುಖ್ಯ ಶಿಕ್ಷಕರು ಮಕ್ಕಳ ಪಟ್ಟಿಯನ್ನು ಹೊಂದಿ ಅದಕ್ಕೆ ತಕ್ಕಂತೆ ಹಾಜರಾತಿ ಆಧಾರದ ಮೇಲೆ ಬಿಸಿಯೂಟ ಕಾರ್ಯಕ್ರಮವನ್ನು ನಿರ್ವಹಿಸಲು ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳತಕ್ಕದ್ದು.
- ಇನ್ನುಳಿದ ಶಾಲೆಗಳ ಮಕ್ಕಳನ್ನು ಸದರಿ ಶಾಲೆಗೆ ಕಳುಹಿಸುವ ಕಾರ್ಯವನ್ನು ಆಯಾ ಶಾಲೆಯ ಮುಖ್ಯ ಶಿಕ್ಷಕರು ಕ್ರಮವಹಿಸಬೇಕಾಗುತ್ತದೆ. ಗುರುತಿಸಲ್ಪಟ್ಟ(ಕೇಂದ್ರ) ಶಾಲೆಯ ಮುಖ್ಯ ಶಿಕ್ಷಕರು ಮಕ್ಕಳ ಪಟ್ಟಿಯನ್ನು ಇತರೆ ಶಾಲೆಗಳಿಂದ ಪಡೆಯತಕ್ಕದ್ದು.

**2. ಬೇಸಿಗೆ ರಜಾ ಅವಧಿಯಲ್ಲಿ ಮಧ್ಯಾಹ್ನ ಬಿಸಿಯೂಟ ಪಡೆಯುವ ಮಕ್ಕಳ ಕುರಿತು ಮಾಹಿತಿ:**

ಬೇಸಿಗೆ ರಜಾ ಅವಧಿಯಲ್ಲಿ ಎಲ್ಲ ಅರ್ಹ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟದ ಅವಕಾಶವಿದೆ. ಆದರೆ ಸಿದ್ಧಪಡಿಸಿದ ಆಹಾರವು ವ್ಯರ್ಥವಾಗದಂತೆ ಕ್ರಮವಹಿಸುವ ಸಲುವಾಗಿ ಮತ್ತು ಪೂರ್ವಸಿದ್ಧತಾ ಭಾಗವಾಗಿ ಈ ಅವಧಿಯಲ್ಲಿ ಬಿಸಿಯೂಟಕ್ಕೆ ಬರುವ ಮಕ್ಕಳ ಸಂಖ್ಯೆಯನ್ನು ಪಡೆಯುವ ಅವಶ್ಯಕತೆ ಇದ್ದು, ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು.

- ಈ ಅವಧಿಯಲ್ಲಿ ಬಿಸಿಯೂಟ ವ್ಯವಸ್ಥೆ ಕುರಿತು ಪೋಷಕರ ಗಮನಕ್ಕೆ ತಂದು ಊಟ ಪಡೆಯುತ್ತಾರೆಯೇ, ಇಲ್ಲವೇ ಎಂಬ ಬಗ್ಗೆ ಅಂದಾಜಿಸುವುದು. ಈ ಸಂಬಂಧ ಪೋಷಕರಿಂದ ಒಪ್ಪಿಗೆಯನ್ನು ಪಡೆಯತಕ್ಕದ್ದು. (ಮಾದರಿ ನಮೂನೆ ಲಗತ್ತಿಸಿದೆ.)
- ಈ ರೀತಿ ಒಪ್ಪಿಗೆ ಪಡೆದ ಮುಖ್ಯ ಶಿಕ್ಷಕರು ಮಕ್ಕಳ ಸಂಖ್ಯೆಯ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳತಕ್ಕದ್ದು ಹಾಗೂ ಮ್ಯಾಪಿಂಗ್ ಪ್ರಕಾರವಾಗಿ ಇತರೆ ಶಾಲೆಗಳಿಂದ ಬರುವ ಮಕ್ಕಳ ಪಟ್ಟಿಯನ್ನು ಸೇರಿಸಿ ಅಡುಗೆ ಕೇಂದ್ರವಾರು ಮಾಹಿತಿಯನ್ನು ಸಂಬಂಧಪಟ್ಟವರಿಗೆ ನೀಡುವುದು ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.
- ಹಿರಿಯ ಪ್ರಾಥಮಿಕ ಶಾಲೆಗಳಿಗೆ ಬೇರೆ ಬೇರೆ ಗ್ರಾಮಗಳಿಂದ ಬರುವ ಮಕ್ಕಳು ಒಂದು ವೇಳೆ ಅವರು ವಾಸಿಸುವ ಗ್ರಾಮದಲ್ಲಿ ಬಿಸಿಯೂಟ ಮಾಡಲು ಇಚ್ಛಿಸಿದಲ್ಲಿ ಅಂತಹ ಮಕ್ಕಳ ಪಟ್ಟಿಯನ್ನು ಸಂಬಂಧಪಟ್ಟ ಶಾಲೆಗಳಿಗೆ ಕಳುಹಿಸುವುದು ಆಯಾ ವಿಧ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಶಾಲೆಯ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.
- ಈ ರೀತಿ ವಿವಿಧ ಶಾಲೆಗಳ ಮುಖ್ಯ ಶಿಕ್ಷಕರುಗಳಿಂದ ಮಕ್ಕಳ ಪಟ್ಟಿಯ ದೃಢೀಕರಣದ ಆಧಾರದ ಮೇಲೆ ಯಾವ ಶಾಲೆಯಲ್ಲಿ ಅನುಷ್ಠಾನಗೊಳ್ಳುತ್ತಿದೆಯೋ ಆ ಶಾಲೆಯ ಮುಖ್ಯ ಶಿಕ್ಷಕರು ಸೂಕ್ತ ದಾಖಲೆಗಳೊಂದಿಗೆ ಬಿಸಿಯೂಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- ಮೇಲ್ಕಂಡ ಬಿಸಿಯುಟ ಮಾಡುವ ಮಕ್ಕಳ ನಿರ್ವಹಣೆಯನ್ನು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಇವರು ಕ್ಲಸ್ಟರ್‌ವಾರು ನೋಡಲ್ ಅಧಿಕಾರಿಗಳನ್ನು ನಿಯೋಜಿಸುವುದು. ನಿಯೋಜಿತ ಸಿ.ಆರ್.ಪಿ./ಇ.ಸಿ.ಒ.ಗಳ ಸಹಕಾರದೊಂದಿಗೆ ನಿರ್ವಹಿಸುವುದು.

**3. ಬೇಸಿಗೆ ರಜಾ ಅವಧಿಯಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆಯ ಕರ್ತವ್ಯ ನಿರ್ವಹಿಸುವ ಶಿಕ್ಷಕರ ಗುರುತಿಸುವಿಕೆ:**

- ಮಧ್ಯಾಹ್ನ ಬಿಸಿಯೂಟಕ್ಕಾಗಿ ಗುರುತಿಸಲ್ಪಟ್ಟ ಅಡುಗೆ ಕೇಂದ್ರಗಳು/ಶಾಲೆಗಳಲ್ಲಿ ಕಾರ್ಯಕ್ರಮದ ಉಸ್ತುವಾರಿವಾಗಿ ಆಯಾ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಒಬ್ಬರು ಶಿಕ್ಷಕರನ್ನು ಗೊತ್ತುಪಡಿಸಿ ನಿಯೋಜಿಸುವುದು. ಪ್ರಸ್ತುತ ಸಾಲಿನಲ್ಲಿ ಈ ಅವಧಿಯಲ್ಲಿ ಅಂತಹ ಅಡುಗೆ ಕೇಂದ್ರವಾರು ಅಂತಹ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಒಬ್ಬರು ಶಿಕ್ಷಕರನ್ನು ನಿಯೋಜಿಸಿ ಗೊತ್ತುಪಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ನಿಯಮಾನುಸಾರ ಜ್ಞಾಪನ ಹೊರಡಿಸತಕ್ಕದ್ದು.

- ಒಂದು ವೇಳೆ ಗುರುತಿಸಲ್ಪಟ್ಟ ಶಾಲೆಯಲ್ಲಿ 250ಕ್ಕಿಂತ ಹೆಚ್ಚು ಮಕ್ಕಳು ನಿರಂತರವಾಗಿ ಬಿಸಿಯೂಟಕ್ಕೆ ಬರುತ್ತಿದ್ದಲ್ಲಿ ಅಂತಹ ಶಾಲೆಗಳಿಗೆ ಮಾತ್ರ ಒಬ್ಬರು ಹೆಚ್ಚುವರಿ ಶಿಕ್ಷಕರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಯೋಜಿಸತಕ್ಕದ್ದು.
- ಬೇಸಿಗೆ ರಜಾ ಅವಧಿಯಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಗಳಿಕೆ ರಜೆಯ ಅವಕಾಶವಿರುವುದರಿಂದ ಶಿಕ್ಷಕರ ನಿಯೋಜನೆಯನ್ನು ನಿಯಾಮಾನುಸಾರ ಕ್ರಮವಹಿಸುವುದು.
- ಬೇಸಿಗೆ ರಜಾ ಅವಧಿಯಲ್ಲಿ ಬಿಸಿಯೂಟಕ್ಕೆ ಗೊತ್ತುಪಡಿಸಲಾದ ಮುಖ್ಯ ಶಿಕ್ಷಕರ/ಸಹ ಶಿಕ್ಷಕರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

4. **ಅಡುಗೆ ಸಿಬ್ಬಂದಿ:**

- ಅಡುಗೆ ಸಿಬ್ಬಂದಿಯನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೆಲಸಕ್ಕೆ ತೆಗೆದುಕೊಳ್ಳಲು ಅಡುಗೆ ಕೇಂದ್ರ ಹೊಂದಿರುವ ಮುಖ್ಯ ಶಿಕ್ಷಕರಿಗೆ ಅಧಿಕಾರ ನೀಡಲಾಗಿದೆ. ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಅಡುಗೆಯವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಡುಗೆಯವರ ಆವಶ್ಯಕತೆ ಇದ್ದಲ್ಲಿ, ಮ್ಯಾಪಿಂಗ್ ಮಾಡಿರುವ ಶಾಲೆಯಲ್ಲಿನ ಅಡುಗೆ ಸಿಬ್ಬಂದಿಯ ಸೇವೆಯನ್ನು ಪಡೆಯುವುದು. ಅಡುಗೆ ಸಹಾಯಕರು ಕಾರ್ಯ ನಿರ್ವಹಿಸಿದ ದಿನಗಳಿಗೆ ಮಾತ್ರ ಸಂಭಾವನೆಯನ್ನು ನೇರವಾಗಿ ಅಡುಗೆಯವರ ಖಾತೆಗೆ ಜಮಾ ಮಾಡುವುದು.
- ಅಡುಗೆ ಸಿಬ್ಬಂದಿಯವರು ಗೌರವ ಸಂಭಾವನೆಯಡಿ ನೇಮಕವಾಗುವುದರಿಂದ ಮತ್ತು ಕೇಂದ್ರ ಸರ್ಕಾರವು 10 ತಿಂಗಳಿಗೆ ಮಾತ್ರ ಸಂಭಾವನೆ ನೀಡುತ್ತಿರುವುದರಿಂದ ಏಪ್ರಿಲ್-10 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿ ಬರಗಾಲದ ಅವಧಿಯಲ್ಲಿ ಕಾರ್ಯನಿರ್ವಹಿಸಲು ನೇಮಕವಾಗುವ ಸಿಬ್ಬಂದಿಯವರನ್ನು ಏಪ್ರಿಲ್-11 ರಿಂದ ಕರ್ತವ್ಯಕ್ಕೆ ಹಾಜರಿಪಡಿಸಿಕೊಂಡು ಸಂಭಾವನೆ ನೀಡಲು ಕ್ರಮವಹಿಸುವುದು.
- ಅಡುಗೆ ಕೇಂದ್ರ ಹೊಂದಿರುವ ಶಾಲೆಯ ಮುಖ್ಯ ಶಿಕ್ಷಕರು ಆಹಾರ ಧಾನ್ಯಗಳ ಬೇಡಿಕೆಯನ್ನು ಸಲ್ಲಿಸುವ ಮುನ್ನ, ಶಾಲಾವಾರು ಬಿಸಿಯೂಟವನ್ನು ಪಡೆಯಲು ಇಚ್ಛಿಸುವ ಮಕ್ಕಳ ಪಟ್ಟಿಯನ್ನು ಫೀಡಿಂಗ್ ಶಾಲೆಯಿಂದ ಪಡೆಯುವುದು.
- ಊಟ ಪಡೆಯಲು ಇಚ್ಛಿಸುವ ಮಕ್ಕಳ ಸಂಖ್ಯೆಯ ಆಧಾರದ ಮೇರೆಗೆ ಆಹಾರ ಧಾನ್ಯಗಳ ಬೇಡಿಕೆ ಮತ್ತು ಪರಿವರ್ತನಾ ವೆಚ್ಚ ಹಾಗೂ ಅಡುಗೆ ಸಿಬ್ಬಂದಿಯ ಗೌರವ ಧನದ ಬೇಡಿಕೆಯನ್ನು ನೋಡಲ್ ಅಧಿಕಾರಿಗಳ ಮೂಲಕ ಅಥವಾ ನೇರವಾಗಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಿಗೆ ಮುಖ್ಯ ಶಿಕ್ಷಕರು/ಸಹ ಶಿಕ್ಷಕರು ದಿನಾಂಕ: 25-3-2017ರೊಳಗೆ ಸಲ್ಲಿಸಬೇಕು.
- ತಾಲ್ಲೂಕುವಾರು ಆಹಾರ ಧಾನ್ಯಗಳ ಬೇಡಿಕೆಯ ಇಂಡೆಂಟ್‌ನ್ನು ಕೆ.ಎಫ್.ಸಿ.ಎಸ್.ಸಿ ರವರಿಗೆ ಸಲ್ಲಿಸಿ ಆಹಾರಧಾನ್ಯಗಳು ಸರಬರಾಜಾಗುವಂತೆ ತಾಲ್ಲೂಕುವಾರ ಬೇಡಿಕೆಯನ್ನು ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ ಜಿಲ್ಲಾ ಪಂಚಾಯತ್ ರವರು ಪಡೆದು ಜಿಲ್ಲಾ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್ ರವರಿಗೆ ಸಲ್ಲಿಸಿ ಸರಬರಾಜಿಗೆ ಅಗತ್ಯ ಕ್ರಮವಹಿಸುವುದು.
- ಸಾದಿಲ್ವಾರು ಅನುದಾನ ಮತ್ತು ಅಡುಗೆಯವರ ಗೌರವಧನವನ್ನು ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಮುಂಗಡವಾಗಿ ಶಾಲೆಗಳ ಖಾತೆಗೆ ಜಮಾ ಮಾಡುವುದು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) ಇವರ ಜವಾಬ್ದಾರಿಯಾಗಿರುತ್ತದೆ.

5. **ಮೇಲುಸ್ತುವಾರಿ:**

- ಸಂಬಂಧಿಸಿದ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ/ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ತಾಲ್ಲೂಕು ಹಂತದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಕಾರ್ಯಕ್ರಮದ ಅನುಷ್ಠಾನಕ್ಕೆ ರೂಪುರೇಶೆಗಳನ್ನು ಸಿದ್ಧಪಡಿಸಿ, ಮೇಲುಸ್ತುವಾರಿಗೆ ಪ್ರತ್ಯೇಕ ಸುತ್ತೋಲೆಯನ್ನು ಅಗತ್ಯ ಚೆಕ್‌ಲಿಸ್ಟ್‌ನೊಂದಿಗೆ ಹೊರಡಿಸುವುದು.
- ತಾಲ್ಲೂಕು ಮತ್ತು ಕ್ಲಸ್ಟರ್ ಹಂತದಲ್ಲಿ ಒಬ್ಬರು ನೋಡಲ್ ಅಧಿಕಾರಿಯಾಗಿ ಗುರುತಿಸಿ ಆದೇಶಿಸಲು ಈ ಮೂಲಕ ತಿಳಿಸಿದೆ.
- ಕ್ಲಸ್ಟರ್ ಹಂತದಲ್ಲಿ ಒಂದು ವೇಳೆ ಸಿ.ಆರ್.ಪಿ.ಗಳು ಲಭ್ಯವಿಲ್ಲದಿದ್ದಲ್ಲಿ ಶಿಕ್ಷಣ ಸಂಯೋಜಕರು, ಬಿ.ಆರ್.ಪಿ ಅಥವಾ ತಾಲ್ಲೂಕು ಮಟ್ಟದಲ್ಲಿ ಲಭ್ಯವಿರುವ ಅಧಿಕಾರಿಯನ್ನು ಗುರುತಿಸಿ ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು.

**6. ಕುಡಿಯುವ ನೀರು:**

ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಬಹುದಾಗಿದ್ದು, ಕುಡಿಯುವ ನೀರು ಮತ್ತು ಅಡುಗೆ ಮಾಡಲು ನೀರಿನ ತೊಂದರೆ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪತ್ರ ಬರೆದು ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನೀರಿನ ಕೊರತೆ ಬಾರದಂತೆ ನಿರ್ವಹಿಸಲು ಸೂಚನೆ ನೀಡಲು ಕ್ರಮವಹಿಸುವುದು.

**7. ಎ.ಎಂ.ಎಸ್ ತಂತ್ರಾಂಶ :**

ಈಗಾಗಲೇ ಎ.ಎಂ.ಎಸ್ ತಂತ್ರಾಂಶವನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಿ ಎಸ್.ಎಂ.ಎಸ್ ಮೂಲಕ ಪ್ರತಿನಿತ್ಯದ ಫಲಾನುಭವಿಗಳ ಮಾಹಿತಿಯನ್ನು ಪಡೆಯಲಾಗುತ್ತಿದೆ. ಅದೇ ರೀತಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಬೇಸಿಗೆ ರಜಾವಧಿಯಲ್ಲಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ವಿತರಿಸುವ ವಿದ್ಯಾರ್ಥಿಗಳ ಮಾಹಿತಿಯನ್ನು ಚಾಲ್ತಿಯಲ್ಲಿರುವ **15544 ಟೋಲ್ ಫ್ರೀ ಸಂಖ್ಯೆಗೆ** ಎಂದಿನಂತೆ ಸಂದೇಶ ರವಾನಿಸುವುದು.

ಮ್ಯಾಪಿಂಗ್ ಮಾಡಿ ಕೇಂದ್ರ ಶಾಲೆಯನ್ನಾಗಿ ಗುರುತಿಸಿರುವ ಶಾಲೆಯ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ಫಲಾನುಭವಿಗಳ ಸಂಖ್ಯೆಯೊಂದಿಗೆ ಇತರೆ ಶಾಲೆಯಿಂದ ಹಾಜರಾಗುವ ವಿದ್ಯಾರ್ಥಿಗಳ **ಸಂಖ್ಯೆಯನ್ನೂ** ಸೇರಿಸಿ **ಒಟ್ಟು ಫಲಾನುಭವಿಗಳ** ಮಾಹಿತಿಯನ್ನು ಪ್ರತಿದಿನ ಎಸ್.ಎಂ.ಎಸ್ ಮಾಡುವುದು.

**8. ಎಂ.ಐ.ಎಸ್ ತಂತ್ರಾಂಶ :**

2017–18ನೇ ಸಾಲಿನ ಬರಗಾಲದಲ್ಲಿ ಬಿಸಿಯೂಟ ಮಾಡುವ ಫಲಾನುಭವಿಗಳ ಮಾಹಿತಿಯನ್ನು ಎಂ.ಐ.ಎಸ್ ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ದಾಖಲಿಸುವುದು.

ಮೇಲ್ಕಂಡ ವಿಷಯವು ಕಾಲಮಿತಿಗೆ ಒಳಪಟ್ಟ ವಿಷಯವಾಗಿದ್ದು, ನಿಗದಿಪಡಿಸಿರುವ ದಿನಾಂಕಗಳಂದೇ ಕ್ರಮವಹಿಸಿ, ಕಛೇರಿಗೆ ವರದಿ ಮಾಡುವುದು. ಯಾವುದೇ ನೆನಪೋಲೆ ಹಾಗೂ ಪತ್ರಗಳಿಗೆ ಅವಕಾಶವಿರುವುದಿಲ್ಲ.

(ಕೌಜಲ್ಗಿ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ.

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರುಗಳಿಗೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್ ಕಛೇರಿ.
5. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ತಾಲ್ಲೂಕು ಪಂಚಾಯತ್ ಕಛೇರಿ.
6. ಕಛೇರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ :-

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರವರಿಗೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು,ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯಾ ಮಾಧ್ಯಮಿಕ ಶಿಕ್ಷಣ ಅಭಿಯಾನ ರವರಿಗೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ.